# ‘ನಿವೇದನೆಯೆಂಬ ವೇದನೆ!

ನಿವೇದನೆಯೆಂಬುದು ವೇದನೆಯೇ ಸರಿ. ಅದು ಭಕ್ತಿಯಾದರೂ ಒಂದೇ, ಪ್ರೇಮವಾದರೂ ಒಂದೇ! ಭಕ್ತಿಯಾದರೋ ಒಮ್ಮುಖವಾದದ್ದು. ಭಕ್ತನಾದವನು ಭಗವಂತನೆಡೆಗೆ ತೋರಿಸುವ ಭಕ್ತಿ, ‘ನಾನು ನಿನ್ನ ಭಕ್ತ. ನನ್ನದು ನಿನ್ನೆಡೆಗೇ ಅಚಲವಾದ ಭಕ್ತಿ, ನಿನಗಿಷ್ಟವಿದೆಯೋ ಇಲ್ಲವೋ ನನಗೆ ಬೇಕಾಗಿಲ್ಲ, ಅಷ್ಟೇ’ ಎಂದು ಬಿಡುವಂತಹ ತಕ್ಷಣಕ್ಕೆ ಯಾವುದೇ ನಿರೀಕ್ಷೆಗಳಿಲ್ಲದ (ತನಗೆ ಕಷ್ಟಬಂದಾಗ ಭಗವಂತ ತನ್ನ ಭಕ್ತಿಗೆ ಕಟ್ಟುಬಿದ್ದು, ಓಡಿ ಬಂದು ಕಾಪಾಡುವನೆಂಬ ಹುಂಬ ಧೈರ್ಯದ) ನಿವೇದನೆ. ಆದರೆ ಪ್ರೇಮ ನಿವೇದನೆ ಇದಕ್ಕಿಂತಹ ಕಷ್ಟವಾದುದು. ಇದರಲ್ಲಿ ನಾನು ನಿನ್ನನ್ನು ಪ್ರೇಮಿಸುತಿದ್ದೇನೆ ಎಂದು ಅವಳಿಗೆ ತಿಳಿಸುವ ಜೊತೆ–ಜೊತೆಗೇ ನಿನಗೂ ನನ್ನೆಡೆಗೆ ಪ್ರೇಮವಿದೆಯೇ? ಎಂದು ತಿಳಿದು ಕೊಳ್ಳುವ ಸಂಕಟ–ತಲ್ಲಣ–ಕಾತರ–ಭಯಾತಂಕಗಳ ವೇದನೆ ಬೇರೆ! ಅದಕ್ಕೇ ನಿವೇದನೆಯೆಂಬುದು ನಿಜವಾದ ‘ಪ್ರಸವ’ ವೇದನೆಯೇ ಸರಿ!

ಪ್ರೇಮವೆಂಬುದು ನನ್ನೆದೆಯಲ್ಲಿ ಹುಟ್ಟಿದಾಗಿನಿಂದ ನಾನು ಇದೇ ತಲ್ಲಣಗಳನ್ನನುಭವಿಸಿದ್ದೇನೆ. ಬೇರೆ ಹುಡುಗರ ವಿಷಯ ಅಷ್ಟಾಗಿ ಗೊತ್ತಿಲ್ಲ, ಆದರೆ ನನಗಿಷ್ಟವಾದ ಹುಡುಗಿಗೆ ನಾನು ತಕ್ಕವನಲ್ಲ, ನನಗಿಂತಲೂ ಒಳ್ಳೇ ಹುಡುಗ ಅವಳ ಬಾಳಿನಲ್ಲಿ ಬಂದೇ ತೀರುತ್ತಾನೆ ಎಂದೆನಿಸಿಬಿಡುತ್ತದೆ, ಹಾಗಾಗಿ ನನ್ನ ಪ್ರೇಮನಿವೇದನೆಗೆ ಅದೇ ಒಂದು ದೊಡ್ಡ ತಡೆಗೋಡೆಯಾಗಿಬಿಡುತ್ತದೆ. ಹಾಗಾದರೆ ನನಗೆ ತಕ್ಕವಳಾದ ಹುಡುಗಿ ಹೇಗಿರಬೇಕು? ಅದರ ಬಗೆಗೂ ನನ್ನಲ್ಲಿ ಗೊಂದಲವಿದೆ. ಹೀಗಾಗಿ ನಿವೇದನೆಯ ವೇದನೆಯೇ ಬೇಡ ಎಂದು ತೀರ್ಮಾನಿಸಿದ್ದೇನೆ! (ಆದರೂ ನನ್ನ ಹೃದಯ ಎಲ್ಲೋ ಕತ್ತಲ ಮೂಲೆಯಲ್ಲಿ ದ್ರವಿಸುತ್ತಿದೆ, ‘ಏನಯ್ಯಾ ನೀನು? ಬರೀ ಕಲ್ಪನೆಯ ಖುಷಿ ಸಾಕೇ? ಕನಸುಗಳ ಸಾಕಾರ ಬೇಡವೇ? ಎಂತೆಂಥವರು, ಎಂತೆಂಥ ಕಷ್ಟದ ಕನಸುಗಳನ್ನು ಕಂಡು, ನನಸಾಗಿಸಿಕೊಳ್ಳಲು ಅಹೋರಾತ್ರಿ ಶ್ರಮಿಸಿ ಧನ್ಯರಾಗುತ್ತಿರುವಾಗ, ಇಂತಹದೊಂದು ಸುಕೋಮಲ ಕನಸ ನನಸು ಮಾಡಿಕೊಳ್ಳಲು ಈ ಸುಲಭದ ದಾರಿ ಹಿಡಿಯಲು ಅಂಜುತ್ತಿರುವೆಯಲ್ಲಾ?’ ಎನ್ನುತ್ತಿದೆ!)

ಇದಲ್ಲದೇ ನಿವೇದನೆಯ ವೇದನೆಗೆ ಇನ್ನೊಂದು (ಎಲ್ಲ ಪ್ರೇಮ ನಿವೇದನೆಗಳಿಗಿರುವಂತಹ) ಆಯಾಮವೂ ಇದೆ. ಅದು ಅವಳ ನಿರಾಕರಣೆ. ನಾನವಳಿಗೆ ತಕ್ಕವನಲ್ಲವೆಂಬ ಸರ್ವಕಾಲಿಕ ಸತ್ಯ ಅವಳಿಗೂ ತಿಳಿದು, ಅದೇ ಕಾರಣವಾಗಿ ಅವಳು ‘ಇಲ್ಲ’ವೆಂದು ನಾನೇ ನಾನಾಗಿ ನಮ್ಮಿಬ್ಬರ ಮಧ್ಯೆ ಹೆಣೆದುಕೊಂಡಿರುವ ಸಿಹಿ–ಸಂಬಂಧದ ಬಳ್ಳಿಯನ್ನು (‘ನನಗೆ ತಿಳಿಯದೇ ಇಷ್ಟೆಲ್ಲ ಯೋಚನೆ ಮಾಡಿದ್ದೀಯಾ?’ ಎಂದು) ಅಚ್ಚರಿಯಿಂದಲೂ, ಅಸಹ್ಯಿಸಿಕೊಂಡೂ ಕತ್ತರಿಸಿಕೊಂಡುಬಿಟ್ಟರೆ ನನ್ನ ಗತಿ?

ಹಾಗಂತ ಇದು ನನ್ನ ಅಹಂನ ಪ್ರಶ್ನೆಯಂತೂ ಖಂಡಿತಾ ಅಲ್ಲ. ‘ದೇಹೀ’ ಎಂದು ಕೈಯೊಡ್ಡಿನಿಂತವನಿಗೆ ಅಹಂ ಎಲ್ಲಿಯದು. ಹಾಗಂತ ಅಥವಾ ಎಲ್ಲ ಉತ್ತಮ ಸ್ನೇಹಿತರಂತೆ, ‘ಅಯ್ಯೋ ಹೇಳಿಕೊಂಡುಬಿಟ್ಟರೆ ಎಲ್ಲಿ ನಮ್ಮಿಬ್ಬರ ಉತ್ತಮ ಸ್ನೇಹ ಕೊನೆಯಾಗಿಬಿಡುತ್ತದೋ ಎಂದು ಭಯಪಟ್ಟೆ’ ಎನ್ನುವಂತಹ ಸಂಧರ್ಭವೂ ಇಲ್ಲ, ಯಾಕೆಂದರೆ ನಮ್ಮಿಬ್ಬರದೂ ಬರೀ ನೆಪಮಾತ್ರದ ಪರಿಚಯ (ಬಹುಶಃ ಈಗದು ನೆಪಮಾತ್ರಕ್ಕಿಂತ ಸ್ವಲ್ಪ ಜಾಸ್ತಿಯಾಗಿರಬಹುದು!). ಹಾಗಾದರೆ ಯಾವುದೇ ನಷ್ಟವಿಲ್ಲ ಹೇಳಿಬಿಡು ಎನ್ನುತ್ತೀರೇನೋ? ಆದರೆ ಪ್ರೇಮನಿವೇದನೆಯಾಗಿ ಅವಳು ತಿರಸ್ಕರಿಸಿಬಿಟ್ಟರೆ ನನ್ನೀ ಕನಸುಗಳದ್ದೇನು ಗತಿ? ಈಗಾದರೋ ನನ್ನ ಸವಿ–ಕನಸುಗಳಿವೆ, ಕಲ್ಪನೆಗಳಿವೆ, ಕಲ್ಪನೆಗಳಲ್ಲಿ ಅವಳು ನನ್ನನ್ನು ಪ್ರೇಮಿಸುತಿದ್ದಾಳೆ, ನಾನು ಸಂತೃಪ್ತನಾಗಿದ್ದೇನೆ, ಹೊರಗಡೆ ಕಲ್ಪನೆಯಾಚೆಗಿನ ವಾಸ್ತವದಲ್ಲಿ ನನ್ನ ಮುಖದ ಮೇಲೆ ನಗುವಿದೆ, ಹೃದಯ ಹಗುರಾಗಿ ಅರಳಿದೆ, ಜೊತೆಗೆ ನಿಮ್ಮೆದುರಿನ ನಿವೇದನೆಯಿದೆ ಮತ್ತು ಎಲ್ಲ ಸುಂದರವಾಗಿದೆ. ಅವಳ ನಿರಾಕರಣೆಯ ನಂತರ ಇವೆಲ್ಲವೂ ಇಲ್ಲವಾಗುತ್ತವೆ, ನಾನು ಮತ್ತದೇ ಮೌನಕ್ಕೆ ಮರಳುತ್ತೇನೆ, ವಿಷಾದಯೋಗಕ್ಕೆ ಬಲಿಯಾಗುತ್ತೇನೆ, ಮತ್ತು ನಿಮಗೆ ಇದೆಲ್ಲವನ್ನು ಕೇಳುವ ಖುಷಿಯೂ ಇಲ್ಲವಾಗುತ್ತದೆ! ಈಗ ಹೇಳಿ, ನಾನು ನಿವೇದನೆಯ ವೇದನೆಯನ್ನನುಭವಿಸಬೇಕೇ?

‘ಇದೆಲ್ಲ ಬರಿಯ ಕೀಳರಿಮೆಯ ಮಾತಾಯ್ತು. ಅಕಸ್ಮಾತ್ ನಿನ್ನ ಪ್ರೇಮ ನಿವೇದನೆಯಾಗಿ, ನಿನ್ನಂತಹ ಅದೃಷ್ಟಹೀನನ ಅದೃಷ್ಟವೂ ತಿರುಗಿಕೊಂಡು ಅವಳ ಉತ್ತರ ‘ಹೌದ’ಂತಾದರೆ ಏನು ಮಾಡ್ತೀಯಾ?’ ಅಂತ ಕೇಳ್ತಿದೀರಾ? ನಾನು ಸಕಾರಾತ್ಮಕವಾಗಿ ಇನ್ನೂ ಏನನ್ನೂ ಯೋಚಿಸಿಲ್ಲ, ಆದರೆ ಒಂದಂತೂ ನಿಜ, ಹಿಂದೊಮ್ಮೆ ಹೇಳಿದಂತೆ ಎಲ್ಲರಿಗಿಂತ ಮೊಟ್ಟ ಮೊದಲು ನಿಮಗೇ ಹೇಳಿ, ನಿಮ್ಮ ಹೊಟ್ಟೆ ಉರಿಸುತ್ತೇನೆ!